**ಸಾಕ್ಷಿಯನ್ನು ದಿಃ *16/04/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಆರಜಿಬಿ ವಕೀಲರಿಂದ 2 ನೇ ಎದುರುದಾರರ** ಪರವಾಗಿ.

ಮೃತನಾದ ಗಾಯಾಳು ಹನುಮಂತಪ್ಪ ನನ್ನ ಮಗ. 1 ನೇ ಅರ್ಜಿದಾರರು ಮತ್ತು ಮಿಕ್ಕಿದ ಅರ್ಜಿದಾರರು ನನ್ನ ಸೊಸೆ ಮತ್ತು ಮೊಮ್ಮಕ್ಕಳು. ನನ್ನ ಮಗನಿಗೆ ಮೋಟಾರುಸೈಕಲವಿತ್ತು, ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ನಾವು ಮೂಲತ ಗದಗ ಜಿಲ್ಲೆಯ ಲಿಂಗದಾಳ ಗ್ರಾಮದವರು ಎಂದರೆ ನಿಜ. ಇವತ್ತೂ ಸಹ ನಾವುಗಳು ಅಲ್ಲಿಂದ ಬಂದಿದ್ದೇವೆ ಎಂದರೆ ನಿಜ. ಅಪಘಾತ ದಿನದಂದು ನನ್ನ ಮಗ ಮತ್ತು ನಮ್ಮ ಸಂಬಂಧಿಕ ಸಂಗಮೇಶ ಇವರು ಮೋಟಾರುಸೈಕಲನಲ್ಲಿ ಸವದತ್ತಿಯ ಯಲ್ಲಮ್ಮನ ಗುಡ್ಡಕ್ಕೆ ಬಂದಿದ್ದರು ಎಂದರೆ ನಿಜ. ಸದರಿ ದಿನದಂದು ಸಂಗಮೇಶ ಮೋಟಾರುಸೈಕಲನ್ನು ಚಲಾಯಿಸುತ್ತಿದ್ದ ಎಂದರೆ ಸಾಕ್ಷಿದಾರರು ನನ್ನ ಮಗ ಸಹ ಚಲಾಯಿಸುತ್ತಿದ್ದ ಎಂದು ಉತ್ತರಿಸುತ್ತಾರೆ. ನನ್ನ ಮಗನಿಗೆ ಮತ್ತು ಸಂಗಮೇಶ ಇಬ್ಬರಿಗೂ ಮೋಟಾರುಸೈಕಲ ಚಲಾಯಿಸಲು ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿತ್ತು. ಇಬ್ಬರದು ಸದರಿ ಪರವಾನಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೋಟಾರುಸೈಕಲನ ರಜಿಸ್ಟರನ ರಿನಿವಲ್ ಆಗಿರುವುದಿಲ್ಲ ಮತ್ತು ವಿಮೆ ಕೂಡ ಇರಲಿಲ್ಲ ಎಂದರೆ ಸರಿಯಲ್ಲ. ಈ ರೀತಿ ಇರಲಾರದ ಕಾರಣ ಪೊಲೀಸರು ಇವರಗಳ ವಿರುದ್ದ ಸಹ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ಸಂಗಮೇಶ ಮೋಟಾರುಸೈಕಲ ಚಲಾಯಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಗಮೇಶ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿಲ್ಲದೆ ಅತೀ ವೇಗ ಮತ್ತು ಅಜಾಗೂರಕತೆಯಿಂದ ವಾಹನವನ್ನು ರಸ್ತೆ ಮಧ್ಯ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಹಂಚಿನಾಳದಿಂದ ಸವದತ್ತಿ ಕಡೆಗೆ ಹೋಗುತ್ತಿದ್ದ ಇನ್ನೊಂದು ಮೋಟಾರುಸೈಕಲ ಅತೀ ವೇಗ ಮತ್ತು ನಿಷ್ಕಾಲಜಿತನದಿಂದ ಬಂದು ಒಂದಕ್ಕೊಂದು ಮುಖಾಮುಖಿಯಾಗಿ ಡಿಕ್ಕಿ ಪಡಿಸಿದವು ಎಂದರೆ ಸರಿಯಲ್ಲ. ಈ ರೀತಿ ಆಗಿರುವ ಅಪಘಾತದಲ್ಲಿ ನನ್ನ ಮಗ ಮತ್ತು ಮೋಟಾರುಸೈಕಲ ಸವಾರ ಸಂಗಮೇಶ ಮತ್ತು ಎದುರುಗಡೆ ಇದ್ದ ಮೋಟಾರುಸೈಕಲನ ಚಾಲಕ ಮೂವರು ಬಿದ್ದರು ಎಂದರೆ ಸರಿಯಲ್ಲ.

ಅಪಘಾತವಾದ ಕೂಡಲೇ ನನ್ನ ಮಗನನ್ನು ಸವದತ್ತಿಯ ಸರಕಾರ ಆಸ್ಪತ್ರೆಯಲ್ಲಿ ದಾಖಲಿಸಿದರು ಎಂದರೆ ನಿಜ. ನನ್ನ ಮಗ ತಲೆಗೆ ಪೆಟ್ಟಾಗಿ ಕೋಮಾದಲ್ಲಿದ್ದ ಎಂದು ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಂತರ ಅವರನ್ನು ಸುಚಿರಾಯ ಆಸ್ಪತ್ರೆಗೆ ರವಾನಿಸಿದರು ಎಂದು

ನಮಗೆ ತಿಳಿಸಿದರು ಎಂದರೆ ನಿಜ. ಎರಡು ದಿನಗಳ ವಿಳಂಬಕ್ಕೆ ಕಾರಣವನ್ನು ನಮ್ಮ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸಂಗಮೇಶ ಇವರು ಸಲ್ಲಿಸಿರುವ ದೂರಿನ ವಿಷಯ ನನಗೆ ಗೊತ್ತು. ಸಂಗಮೇಶ ಇವರು ಸಹ ಆಸ್ಪತ್ರೆಯಲ್ಲಿ ದಾಖಲಾಗಿರುವ ಕಾರಣ ಎರಡು ದಿನಗಳ ಕಾಲ ವಿಳಂಬವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿ.ಪಿ.5 ಮತ್ತು 6 ರಲ್ಲಿ ನಮೂದಿಸಿರುವ ಗಾಯಗಳಿಗೆ ಒಂದಕ್ಕೊಂದು ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಿಃ27-08-2021 ರಿಂದ 13-10-2021 ರವರೆಗೆ ಚಿಕಿತ್ಸೆ ಪಡೆದು ಡಿಸಚಾರ್ಜ ಆಗಿರುವ ಕುರಿತು ಡಿಸಚಾರ್ಜ ಸಮರಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ಎರಡು ತಿಂಗಳ ಕಾಲ ಚಿಕಿತ್ಸೆ ಪಡೆದಿರದ ಕಾರಣ ಡಿಸಚಾರ್ಜ ಸಮರಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ಹಾಜರುಪಡಿಸಿದರೆ ಚಿಕಿತ್ಸೆಯ ಕುರಿತು ನಿಜಾಂಶ ಹೊರಬಿಳುತ್ತದೆ ಎಂದು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಿಃ10-11-2021 ರಿಂದ 19-11-2021 ರವರೆಗೆ ಸಂಜೀವಿನಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಕುರಿತು ಸಹ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಚಿಕಿತ್ಸೆಯ ಕುರಿತು ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಪ್ರಮಾಣಪತ್ರದಲ್ಲಿ ಬರೆದ ಬೆಂಗಳೂರಿನ ಭಗವಾನ ಮಹಾವೀರ ಜೈನ ಆಸ್ಪತ್ರೆಯಲ್ಲಿ ದಾಖಲಾಗಿರುವ ಮತ್ತು ಚಿಕಿತ್ಸೆ ನೀಡಿರುವ ಕುರಿತು ಯಾವುದೇ ವಿವರಗಳನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಈ ಕುರಿತು ಸಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಚಿಕಿತ್ಸೆಗೆ 40 ಲಕ್ಷ ರೂಪಾಯಿ ಮೇಲ್ಪಟ್ಟು ಖರ್ಚು ಮಾಡಿದ್ದೆವೆ ಎಂದು ಹೇಳಿರುವ ಹೇಳಿಕೆ ಆಧಾರ ರಹಿತ ಸುಳ್ಳು ಹೇಳಿಕೆ ಎಂದರೆ ಸರಿಯಲ್ಲ.

ಅಪಘಾತವು ದಿಃ27-08-2021 ರಂದು ಆಗಿದ್ದರು ಸಹ ಗಾಯಾಳು ತನ್ನ ಅರ್ಜಿಯನ್ನು ದಿಃ29-09-2022 ರಂದು ವಿಳಂಬವಾಗಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಾವು ಸಲ್ಲಿಸಿರುವ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ನನ್ನ ಮಗ ಅರ್ಜಿ ಸಲ್ಲಿಸಿದ ನಂತರ ದಿಃ11-11-2023 ರಂದು ತೀರಿಹೋಗಿರುತ್ತಾನೆ ಎಂದರೆ ನಿಜ. ಸದರಿಯವರು ತೀರಿಹೋದ ಕಾರಣ ತಿಳಿಯಲು ಅವರ ಮೃತದೇಹವನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ತಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಗನನ್ನು ಚಿಕಿತ್ಸೆಗೆ ಎಂದು ಕರೆದುಕೊಂಡು ಹೋಗಿದ್ದರು ಎಂದು ಉತ್ತರಿಸುತ್ತಾರೆ. ನಿ.ಪಿ.8 ರಲ್ಲಿ ನನ್ನ ಮಗನ ಮೃತದೇಹವನ್ನು ಪರೀಕ್ಷಿಸಲು ತಂದಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತೀರಿಹೋದ ಕಾರಣ ಇಲ್ಲಿಯವರೆಗೂ ವೈದ್ಯರು ಶವಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ತನಿಖೆಯಲ್ಲಿ ಅವನ ಅಂಗಾಂಗಳನ್ನು ಪರೀಕ್ಷೆಗಾಗಿ ತಜ್ಞರಿಗೆ ಕಳಿಸಿರುತ್ತಾರೆ ಎಂದರೆ ಇರಬಹುದು. ಆದ್ದರಿಂದ ಅಪಘಾತವಾದ ಗಾಯಗಳಿಂದ ನನ್ನ ಮಗ ತೀರಿಹೋಗಿಲ್ಲ ಎಂದರೆ ಸರಿಯಲ್ಲ.

ನನ್ನ ಮಗ ಮಾಸಿಕ 25 ಸಾವಿರ ರೂಪಾಯಿ ದುಡಿಯುತ್ತಿದ್ದಾ ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಚಿಕಿತ್ಸೆಗಾಗಿ 40 ಲಕ್ಷ ರೂಪಾಯಿಗಳನ್ನು ಯಾರಿಂದ ಪಡೆದಿದ್ದೇವೆ ಎಂದು ವಿವರಗಳನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವೈದ್ಯಕೀಯ ವೆಚ್ಚಕ್ಕಾಗಿ ಖರ್ಚು ಮಾಡಿರುವ 40 ಲಕ್ಷ ರೂಪಾಯಿ, ನಂತರ 1 ಲಕ್ಷ ಮತ್ತು ಶವ ಸಂಸ್ಕಾರಕ್ಕೆ 50 ಸಾವಿರ ರೂಪಾಯಿ ಖರ್ಚಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಹಣದ ಸಲುವಾಗಿ ನಾವೇ ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿಗಳನ್ನು ಹಾಜರುಪಡಿಸಿ, ಅದರಂತೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.